## ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – ಸೆಪ್ಟೆಂಬರ್ – 2019

## 9 ನೆಯ ತರಗತಿ – ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

**ಸಮಯ : 01–30 ಗಂಟೆಗಳು** **ಗರಿಷ್ಠ ಅಂಕಗಳು : 40**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **4 * 1 = 4**

1. ಇವುಗಳಲ್ಲಿ ಕನ್ನಡದ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ವಾಗ್ದೇವಿ (ಬಿ) ಖಗೋಳ
   (ಸಿ) ಬೆಳ್ಳಗಾಗಿ (ಡಿ) ಚಳಿಗಾಲ
2. 'ಹಣೆಗಣ್ಣ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   (ಎ) ತತ್ಪುರುಷ (ಬಿ) ದ್ವಂದ್ವ
   (ಸಿ) ಬಹುವ್ರೀಹಿ (ಡಿ) ಅಂಶಿ
3. "ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು." – ಈ ವಾಕ್ಯದಲ್ಲಿರುವ ಅಲಂಕಾರ;
   (ಎ) ಉಪಮಾ (ಬಿ) ರೂಪಕ
   (ಸಿ) ದೃಷ್ಟಾಂತ (ಡಿ) ಉತ್ಪ್ರೇಕ್ಷೆ
4. ಕಂದಪದ್ಯದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ;
   (ಎ) 32 (ಬಿ) 64
   (ಸಿ) 12 (ಡಿ) 20

**II. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **4 * 1 = 4**

5. ಮೌಲ್ವಿ ಅವರು ಕೈಯಲ್ಲಿ ಹಿಡಿದಿದ್ದ ಕನ್ನಡದ ಪುಸ್ತಕ ಯಾವುದು?
6. ಶಿವರಾಮ ಕಾರಂತರಿಗೆ ಜಯಪುರದ ಮನೆಗಳ ಮೇಲೆ ಮೋಹವೇಕೆ?
7. ಕಯ್ಯಾರ ಕಿಞ್ಞಣ್ಣ ರೈ ಅವರ ಪ್ರಕಾರ ಕಡಿದೊಗೆಯ ಬೇಕಾದ ಪಾಶಗಳು ಯಾವುವು?
8. ಹೆಮ್ಮರದ ಹೊದರಿನಲ್ಲಿದ್ದ ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **4 * 2 = 8**

9. ಕನ್ನಡ ಮೌಲ್ವಿ ಅವರ ವಿದ್ಯಾಭ್ಯಾಸ ಹೇಗೆ ನಡೆಯಿತು?
10. ಮಾವಿನ ಮರದಡಿಯಲ್ಲಿ ಉದುರಿದ್ದ ಮುತ್ತುಗದ ಹೂವುಗಳು ಹೇಗೆ ಕಾಣುತ್ತಿದ್ದವು?
11. ಪಂಢರೀಬಾಯಿ ಅವರ ಸಿನಿಮಾ ಯಾನ ಹೇಗೆ ಪ್ರಾರಂಭವಾಯಿತು?
12. ಲೇಖಕಿ ಕೆ. ನೀಲಾ ಅವರು ರಂಜಾನ್ ಹಬ್ಬದ ಸಡಗರ ಹೇಗೆ ವರ್ಣಿಸುತ್ತಾರೆ?

**IV. ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2 * 2 = 4**

13. ಶಿವರಾಮ ಕಾರಂತ
14. ರತ್ನಾಕರವರ್ಣಿ

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **2 * 2 = 4**

15. "ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯ ನಿಕ್ಕುವುದು"
16. "ಕುರುಡು ವಾತ್ಸಲ್ಯದಲ್ಲಿ ಕಳೆದುಕೊಂಡ ವಿವೇಕ"

**VI. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 * 2 = 2**

17. ನವಭಾವ ________________

________________

________________

________________ ಯೇರಬೇಕು ।

ಅಥವಾ

ಉನ್ನತೋನ್ನತ ________________

________________

________________

________________ ಬೆನ್ನಟ್ಟಬೇಕು ।

**VII. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಆಧರಿಸಿ ಸಾರಾಂಶವನ್ನು ಬರೆಯಿರಿ.** **1 * 2 = 2**

18. ನಿಯತಿಯನಾರ್ ಮೀಱಿದಪರ್
ಭಯಮೇವುದೊ ಮುಟ್ಟಿದೆಡೆಗೆ ಸೈರಿಸುವುದೆ ಕೇಳ್ ।
ನಯವಿದೆ ಪೆತ್ತ ಪರೀಷಹ
ಜಯಮೆ ತಪಂ ತಪಕೆ ಬೇಱೆ ಕೋಡೆರಡೊಳವೇ ॥

**VIII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1 * 4 = 4**

19. ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ವಿವರಿಸಿ.

ಅಥವಾ

ಹಿಂದೂಧರ್ಮ ಮತ್ತು ತತ್ತ್ವಶಾಸ್ತ್ರದ ಬಗ್ಗೆ ರಾಧಾಕೃಷ್ಣನ್ ಅಭಿಪ್ರಾಯವೇನು? ವಿವರಿಸಿ.

**IX. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01*04 =04 (2+2)**

20. ಭಾರತೀಯ ಕ್ರಿಕೆಟಿನ ಯಶಸ್ಸಿನ ಹಿಂದೆ ನೂರಾರು ಖ್ಯಾತನಾಮರಿದ್ದಾರೆ. ಅವರಲ್ಲಿ ಕರ್ನಾಟಕದ ರಾಹುಲ್ ದ್ರಾವಿಡ್ ಸಹ ಒಬ್ಬರು. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ಮಾತು ರಾಹುಲ್ ದ್ರಾವಿಡ್ ಅವರಿಗೆ ಸೊಗಸಾಗಿ ಅನ್ವಯವಾಗುತ್ತದೆ. ಅವರು ಬಾಲ್ಯದಲ್ಲಿಯೇ ಕ್ರಿಕೆಟ್ ಆಟದಲ್ಲಿ ಆಸಕ್ತಿಹೊಂದಿ ಸತತ ಅಭ್ಯಾಸ ಮಾಡುತ್ತಿದ್ದರು. ಅದರ ಫಲವಾಗಿ ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ಶಾಲಾತಂಡವನ್ನು ಪ್ರತಿನಿಧಿಸುವಂತಾಯಿತು. ಆಡಿದ ಮೊದಲ ಪಂದ್ಯದಲ್ಲಿಯೇ ಶತಕವನ್ನು ಬಾರಿಸಿದರು. ಒಂದು ಉತ್ತಮವಾದ ಎಸೆತವು ಪ್ರಸಿದ್ಧ ಆಟಗಾರನನ್ನಾದರೂ ಔಟ್ ಮಾಡಬಹುದು. ಆದರೆ ರಾಹುಲ್ ದ್ರಾವಿಡ್ ಅವರದ್ದು ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನು ನಿಭಾಯಿಸುವ, ವಿಕೆಟ್ಟನ್ನು ಒಪ್ಪಿಸದಿರುವ, ಸಾವಕಾಶವಾಗಿ ರನ್ ಗಳಿಸುವ ಅದ್ವಿತೀಯ ಬ್ಯಾಟಿಂಗ್ ಶೈಲಿ. ದಿನವಿಡಿ ಕ್ರೀಸಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಅವರದ್ದು. ಅದೇ ಅವರನ್ನು 'ಗೋಡೆ' ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರನ್ನಾಗಿಸಿತು. ಬೌಂಡರಿ ಬಾರಿಸು ಅಥವಾ ಔಟಾಗು ಎಂಬ ಮನೋಭಾವದ ಆಟಗಾರರಿಗಿಂತ ಭಿನ್ನವಾದ ಶೈಲಿ ರಾಹುಲ್ ಅವರದ್ದು. ಸಂಯಮದ ಹೊಡೆತ, ಉತ್ತಮ ಎಸೆತವನ್ನು ಗೌರವಿಸುವುದು, ಕೆಟ್ಟ ಎಸೆತವನ್ನು ಅಷ್ಟೇ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವುದು, ಎಲ್ಲ ಬಗೆಯ ಹೊಡೆತಗಳಲ್ಲೂ ಶಿಸ್ತು,

ಕಲಾತ್ಮಕತೆ, ಎಲ್ಲವೂ ನಯನ ಮನೋಹರ. ಇವು ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯವಾಗಿತ್ತು. ರಾಹುಲ್ ದ್ರಾವಿಡ್ ಅವರು ಎಂದೂ ಸ್ವಂತ ದಾಖಲೆಗಾಗಿ ಆಡಿದವರಲ್ಲ; ತಂಡದ ಗೆಲುವಿಗಾಗಿ; ದೇಶದ ಗೌರವಕ್ಕಾಗಿ ಆಡಿದವರು.

**ಪ್ರಶ್ನೆಗಳು :**

(ಅ) ರಾಹುಲ್ ದ್ರಾವಿಡ್ ಅವರನ್ನು 'ಗೋಡೆ' ಎಂದು ಕರೆಯಲು ಕಾರಣವೇನು?

(ಬ) ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯಗಳೇನು?

**X. ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರ ಬರೆಯಿರಿ.** **1 * 4 = 4**

21. ನಿಮ್ಮನ್ನು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಕಂಪಲಾಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಶಿವರಾಜು' ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಸ್ಥಳೀಯ ದಿನಪತ್ರಿಕೆ ಸಂಪಾದಕರಿಗೆ ಪತ್ರವನ್ನು ಬರೆಯಿರಿ.

ಅಥವಾ

'ನಾನು ಮೆಚ್ಚಿದ ಪುಸ್ತಕ' ಎಂಬ ವಿಷಯವನ್ನು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.

---- 0 ----

## ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ ಸೆಪ್ಟೆಂಬರ್ – 2019

### 9 ನೆಯ ತರಗತಿ – ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

# ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**ಸಮಯ : 1–30 ಗಂಟೆಗಳು** **ಗರಿಷ್ಠ ಅಂಕಗಳು : 40**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 4 * 1 = 4**

**(ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. ಇವುಗಳಲ್ಲಿ ಕನ್ನಡದ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ವಾಗ್ದೇವಿ (ಬಿ) ಖಗೋಳ
   (ಸಿ) ಬೆಳ್ಳಗಾಗಿ (ಡಿ) ಚಳಿಗಾಲ

   **ಉತ್ತರ : (ಡಿ) ಚಳಿಗಾಲ**

2. **'ಹಣೆಗಣ್ಣ'** ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   (ಎ) ತತ್ಪುರುಷ (ಬಿ) ದ್ವಂದ್ವ
   (ಸಿ) ಬಹುವ್ರೀಹಿ (ಡಿ) ಅಂಶಿ

   **ಉತ್ತರ : (ಸಿ) ಬಹುವ್ರೀಹಿ**

3. **"**ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು.**"** – ಈ ವಾಕ್ಯದಲ್ಲಿರುವ ಅಲಂಕಾರ;
   (ಎ) ಉಪಮಾ (ಬಿ) ರೂಪಕ
   (ಸಿ) ದೃಷ್ಟಾಂತ (ಡಿ) ಉತ್ಪ್ರೇಕ್ಷೆ

   **ಉತ್ತರ : (ಎ) ಉಪಮಾ**

4. ಕಂದಪದ್ಯದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ;
   (ಎ) 32 (ಬಿ) 64
   (ಸಿ) 12 (ಡಿ) 20

   **ಉತ್ತರ : (ಬಿ) 64**

**II. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 4 * 1 = 4**

**(ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)**

5. ಮೌಲ್ವಿ ಅವರು ಕೈಯಲ್ಲಿ ಹಿಡಿದಿದ್ದ ಕನ್ನಡದ ಪುಸ್ತಕ ಯಾವುದು?
   ಮೌಲ್ವಿ ಅವರು ಹಿಡಿದಿದ್ದ ಕನ್ನಡದ ಪುಸ್ತಕ **'ಕುಮಾರವ್ಯಾಸ ಭಾರತ.'**
6. ಶಿವರಾಮ ಕಾರಂತರಿಗೆ ಜಯಪುರದ ಮನೆಗಳ ಮೇಲೆ ಮೋಹವೇಕೆ?
   ಜಯಪುರದ ಒಂದೊಂದು ಮನೆಯೂ ಒಂದೊಂದು ಶೈಲಿಯದಾಗಿದ್ದು ಒಂದೊಂದು ದೇಶದ್ದೂ ಆಗಿ ಕಾಣಿಸುತ್ತಿರಲಿಲ್ಲ ಆದ್ದರಿಂದ ಲೇಖಕರಿಗೆ ಜಯಪುರದ ಮನೆಗಳ ಮೇಲೆ ಮೋಹವಿತ್ತು.
7. ಕಯ್ಯಾರ ಕಿಞ್ಞಣ್ಣ ರೈ ಅವರ ಪ್ರಕಾರ ಕಡಿದೊಗೆಯ ಬೇಕಾದ ಪಾಶಗಳು ಯಾವುವು?
   ಕಯ್ಯಾರ ಕಿಞ್ಞಣ್ಣ ರೈ ಅವರ ಪ್ರಕಾರ ಕಡಿದೊಗೆಯಬೇಕಾದ ಪಾಶಗಳು **ಜಾತಿ, ಕುಲ, ಮತ ಧರ್ಮಗಳು.**

8. ಹೆಮ್ಮರದ ಹೊದರಿನಲ್ಲಿದ್ದ ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?
ಹೆಮ್ಮರದ ಹೊದರಿನಲ್ಲಿದ್ದ ಜೋಡಿ ಪಾರಿವಾಳಗಳು ಒಂದನ್ನೊಂದು ಅಗಲದೆ ಹಗಲಿರುಳು ಜೊತೆಗೂಡಿ ಬಾಳುತ್ತಿದ್ದವು.

**III. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 4 * 2 = 8**

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

9. ಕನ್ನಡ ಮೌಲ್ವಿ ಅವರ ವಿದ್ಯಾಭ್ಯಾಸ ಹೇಗೆ ನಡೆಯಿತು?
ಮೌಲ್ವಿ ಅವರ ಊರಿನಲ್ಲಿ ಉರ್ದು ಶಾಲೆ ಇರಲಿಲ್ಲ. ಆರು ಮೈಲಿ ದೂರದ ಹಳ್ಳಿಯಲ್ಲಿ ಒಂದು ಉರ್ದು ಶಾಲೆ ಇತ್ತು. ಅಲ್ಲಿಯ ಉಪಾಧ್ಯಾಯರು ವಾರದಲ್ಲಿ ಎರಡು ದಿನ ಅಂದರೆ ಶನಿವಾರ ಮತ್ತು ಭಾನುವಾರ ಮೌಲ್ವಿಯವರ ಮನೆಗೆ ಬಂದು, ಇವರಿಗೆ ಉರ್ದು ಪಾಠವನ್ನು ಹೇಳುವಂತೆ ಇವರ ತಂದೆ ಗೊತ್ತು ಮಾಡಿದ್ದರು. ಆ ಉಪಾಧ್ಯಾಯರ ನೆರವಿನಿಂದ ಮೌಲ್ವಿಯವರು ಉರ್ದುವನ್ನು ಬೇಗ ಬೇಗ ಕಲಿತರು.
10. ಮಾವಿನ ಮರದಡಿಯಲ್ಲಿ ಉದುರಿದ್ದ ಮುತ್ತುಗದ ಹೂವುಗಳು ಹೇಗೆ ಕಾಣುತ್ತಿದ್ದವು?
ಮಾವಿನ ಮರದಡಿಯಲ್ಲಿ ಉದುರಿದ್ದ ಮುತ್ತುಗದ ಹೂವುಗಳು ವಸಂತನು ಶಿಶಿರನನ್ನು ಹಿಡಿದು, ಹೂವು ಬಿಟ್ಟ ಮಾವಿನ ಮರದ ಕಾಲ್ಮಣೆಯ ಮೇಲೆ ಚೂರುಚೂರಾಗಿ ಕೊಚ್ಚಿ ಹಾಕಿದ ಮಾಂಸದ ತುಂಡುಗಳಂತೆ ಕಾಣುತ್ತಿದ್ದವು.
11. ಪಂಢರೀಬಾಯಿ ಅವರ ಸಿನಿಮಾ ಯಾನ ಹೇಗೆ ಪ್ರಾರಂಭವಾಯಿತು?
ಪಂಡರೀಬಾಯಿ ಅವರು ತಮ್ಮ ಅಣ್ಣ ವಿಮಲಾನಂದ ಅವರ 'ಆದರ್ಶ ನಾಟಕ ಸಂಘ' ಎಂಬ ನಾಟಕ ಕಂಪನಿಯ 'ಮುದುಕನ ಮದುವೆ' ಎಂಬ ನಾಟಕದಲ್ಲಿ ಅಭಿನಯ ಮಾಡುತ್ತಿದ್ದರು. ಈ ನಾಟಕವನ್ನು ನೋಡಲು ಪಿಟೀಲು ಚೌಡಯ್ಯ ಅವರು ಮತ್ತು ಸಿನಿಮಾ ಪ್ರವರ್ತಕರಾಗಿದ್ದ ಕೆ. ಹಿರಣ್ಣಯ್ಯ ಅವರು ಬಂದಿದ್ದರು. ಅದೇ ಸಮಯಕ್ಕೆ ಅವರು 'ವಾಣಿ' ಎಂಬ ಚಲನಚಿತ್ರವನ್ನು ಸಿದ್ಧಗೊಳಿಸುತ್ತಿದ್ದರು. ಅಂದು ರಂಗದ ಮೇಲೆ ಪಂಢರೀಬಾಯಿ ಅವರ ಅಭಿನಯವನ್ನು ಕಂಡು, ಮೆಚ್ಚಿ ತಮ್ಮ ಚಿತ್ರದಲ್ಲಿ ಸಣ್ಣ ಪಾತ್ರವೊಂದನ್ನು ನೀಡಿದರು. ಹೀಗೆ ಮಹಾನಟಿ ಪಂಢರೀಬಾಯಿ ಅವರ ಸಿನಿಮಾ ಯಾನ ಪ್ರಾರಂಭವಾಯಿತು.
12. ಲೇಖಕಿ ಕೆ. ನೀಲಾ ಅವರು ರಂಜಾನ್ ಹಬ್ಬದ ಸಡಗರ ಹೇಗೆ ವರ್ಣಿಸುತ್ತಾರೆ?
ಲೇಖಕಿ ಕೆ. ನೀಲಾ ಅವರು "ಚಂದ್ರನು ಮುಖ ತೋರಿದ ಮೇಲೆ ರಂಜಾನ್ ಹಬ್ಬದ ಸಡಗರ ಪ್ರಾರಂಭವಾಗುತ್ತದೆ. ಹಬ್ಬದ ಹಿಂದಿನ ದಿನ ರಾತ್ರಿ ನಗರದ ಬಜಾರೆಲ್ಲ ಬೆಳಕಿನ ಜಗಮಗದಿಂದ ಹೊಳೆಯುತ್ತದೆ. ಉಪವಾಸ ಆರಂಭವಾದ ಮೇಲೆ ಹೆಚ್ಚು ಕಡಿಮೆ ರಾತ್ರಿಗಳು ಹಗಲಾಗಿರುತ್ತವೆ. ದೀಪಾವಳಿಯ ಸಾಲುದೀಪಗಳು ಹೊಳೆಯುವಂತೆ ಕಾಣುತ್ತದೆ. ದಸ್ತರ್‌ಖಾನಾದ ಮೇಲೆ ರಂಜಾನ್ ಹಬ್ಬದ ಖಾದ್ಯಗಳು, ರುಚಿಯಾದ ಗುಲ್‌ಗುಲೆ ಮತ್ತು ರಹಮ್, ಹಾಲಿನಿಂದ ಮಾಡಿದ ಸುರಕುಂಬಾ ಇರುತ್ತವೆ" ಎಂದು ರಂಜಾನ್ ಹಬ್ಬದ ಸಡಗರವನ್ನು ವರ್ಣಿಸುತ್ತಾರೆ.

**IV. ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**
**2 * 2 = 4**

| | |
|---|---|
| **ಸ್ಥಳ, ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ಒಟ್ಟು** | **2 ಅಂಕಗಳು** |

13. ಶಿವರಾಮ ಕಾರಂತ
**ಕಡಲತೀರದ ಭಾರ್ಗವ** ಎಂದು ಪ್ರಸಿದ್ಧರಾದ **ಶ್ರೀ ಕೋಟ ಶಿವರಾಮ ಕಾರಂತ** ಅವರು ಕ್ರಿ. ಶ. **1902** ರಲ್ಲಿ ಉಡುಪಿ ಜಿಲ್ಲೆಯ **ಕೋಟ**ದಲ್ಲಿ ಜನಿಸಿದರು. ಇವರು ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ವಿಜ್ಞಾನ, ಯಕ್ಷಗಾನ, ಪ್ರವಾಸ ಸಾಹಿತ್ಯ, ಶಿಕ್ಷಣ, ಪರಿಸರ, ಗೀತನಾಟಕ, ನಾಟಕ, ಪತ್ರಿಕೋದ್ಯಮ, ಚಲನಚಿತ್ರ – ಹೀಗೆ ಹಲವು ಕ್ಷೇತ್ರಗಳಲ್ಲಿ ಪರಿಣತಿ ಪಡೆದಿದ್ದರು. ಇವರು **ಅಬುವಿನಿಂದ ಬರಾಮಕ್ಕೆ**, ಮೂಕಜ್ಜಿಯ ಕನಸುಗಳು, ಚೋಮನದುಡಿ, ಮರಳಿ ಮಣ್ಣಿಗೆ, ಬೆಟ್ಟದ ಜೀವ, ಅಳಿದ ಮೇಲೆ, ಅಪೂರ್ವ ಪಶ್ಚಿಮ, ಯಕ್ಷಗಾನ ಬಯಲಾಟ, ಹುಚ್ಚು ಮನಸ್ಸಿನ ಹತ್ತು ಮುಖಗಳು, ಮೈಮನಗಳ ಸುಳಿಯಲ್ಲಿ – ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ

**'ಭಾರತೀಯ ಜ್ಞಾನಪೀಠ ಪ್ರಶಸ್ತಿ', 'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ', 'ಪಂಪ ಪ್ರಶಸ್ತಿ'** – ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

14. ರತ್ನಾಕರವರ್ಣಿ
ಕನ್ನಡ ಸಾಂಗತ್ಯ ಕವಿಗಳಲ್ಲಿ ಅಗ್ರಗಣ್ಯರಾದ **ಶ್ರೀ ರತ್ನಾಕರವರ್ಣಿ** ಅವರು **ಕ್ರಿ. ಶ. 1560** ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ **ಮೂಡುಬಿದರೆ**ಯಲ್ಲಿ ಜನಿಸಿದರು. ಇವರು ತಾಳಪ್ರದೇಶದ ಭೈರರಸ ಒಡೆಯರ ಆಸ್ಥಾನದಲ್ಲಿ ಕೆಲವು ಕಾಲ **ಶೃಂಗಾರ ಕವಿ** ಅಭಿಧಾನಕ್ಕೆ ಪಾತ್ರರಾಗಿದ್ದರು. ಇವರು ಯೋಗಶಾಸ್ತ್ರ ಮತ್ತು ಕಾವ್ಯಶಾಸ್ತ್ರಗಳೆರಡರಲ್ಲೂ ಪರಿಣತರಾಗಿದ್ದರು. ಇವರು ಅಪ್ಪಟ ದೇಸೀ ಛಂದಸ್ಸಾದ ಸಾಂಗತ್ಯದಲ್ಲಿ **'ಭರತೇಶ ವೈಭವ'** ಎಂಬ ಬೃಹತ್ಕಾವ್ಯವನ್ನು, ಅಪರಾಜಿತೇಶ್ವರ ಶತಕ, ತ್ರಿಲೋಕ ಶತಕ, ರತ್ನಾಕರಾಧೀಶ್ವರ ಶತಕ ಎಂಬ ಜೈನ ಧಾರ್ಮಿಕ ಕಾವ್ಯಗಳನ್ನು ರಚಿಸಿದ್ದಾರೆ.

**V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **2 * 2 = 4**

| | |
|---|---|
| **ಆಯ್ಕೆ : ಕರ್ತೃ – ಆಕರ – ಪತ್ಯ** | **1 ಅಂಕ** |
| **ಸಂದರ್ಭ : ಯಾರು – ಯಾರಿಗೆ – ಯಾವಾಗ** | **1 ಅಂಕ** |
| **ಒಟ್ಟು** | **2 ಅಂಕಗಳು** |

15. **"**ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯ ನಿಕ್ಕುವುದು**"**
**ಆಯ್ಕೆ :** ಈ ವಾಕ್ಯವನ್ನು **ಶ್ರೀ ಬಿ. ಎಂ. ಶ್ರೀ** ಅವರು ಸಂಪಾದಿಸಿರುವ **'ಕನ್ನಡ ಬಾವುಟ'** ಕೃತಿಯಿಂದ ಆಯ್ದ **'ಧರ್ಮಸಮದೃಷ್ಟಿ'** ಶಾಸನದಿಂದ ಆರಿಸಲಾಗಿದೆ.
**ಸಂದರ್ಭ :** ರಾಜನಾದ ವೀರಬುಕ್ಕರಾಯನು ಜೈನಧರ್ಮದ ಸುಧಾರಣೆಗಾಗಿ ಕೈಗೊಳ್ಳಬೇಕಾದ ಕಾರ್ಯಗಳನ್ನು ಸೂಚಿಸುವ ಸಂದರ್ಭದಲ್ಲಿ ಶ್ರೀವೈಷ್ಣವರಿಗೆ ಈ ಮಾತನ್ನು ಹೇಳುತ್ತಾನೆ.
**ಸ್ವಾರಸ್ಯ :** ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿದು ಪುನಶ್ಚೇತನ ಗೊಳಿಸಬೇಕು ಎಂಬ ವಿಶಾಲ ಮನೋಭಾವನೆಯನ್ನು ಈ ಮಾತಿನಲ್ಲಿ ಕಾಣಬಹುದಾಗಿದೆ.

16. **"**ಕುರುಡು ವಾತ್ಸಲ್ಯದಲ್ಲಿ ಕಳೆದುಕೊಂಡ ವಿವೇಕ**"**
**ಆಯ್ಕೆ :–** ಈ ವಾಕ್ಯವನ್ನು **ಸು. ರಂ. ಎಕ್ಕುಂಡಿ** ಅವರ **'ಸಮಗ್ರ ಕಥನ ಕವನಗಳು'** ಕೃತಿಯಿಂದ ಆಯ್ದ **'ಪಾರಿವಾಳ'** ಎಂಬ ಪದ್ಯಪಾಠದಿಂದ ಆರಿಸಲಾಗಿದೆ.
**ಸಂದರ್ಭ :–** ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದ ಪಾರಿವಾಳಗಳ ಸಂಸಾರ ಕುರುಡು ವಾತ್ಸಲ್ಯದಿಂದ ಬೇಡ ಬೀಸಿದ ಬಲೆಗೆ ಬಿದ್ದ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ :–** ಕುರುಡು ವಾತ್ಸಲ್ಯ ಒಳ್ಳೆಯದಲ್ಲ. ಇದರಿಂದ ನಷ್ಟವೇ ಹೆಚ್ಚು. ಸಂಕಷ್ಟದ ಸಮಯದಲ್ಲಿ ವಿವೇಕದಿಂದ ಆಲೋಚಿಸಿ ಕಾರ್ಯಪ್ರವೃತ್ತರಾದಾಗ ಸಮಸ್ಯೆಗೆ ಸೂಕ್ತವಾದ ಪರಿಹಾರವನ್ನು ಕಂಡುಕೊಳ್ಳಬಹುದು ಎಂಬುದನ್ನು ಕವಿಗಳು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ಹೇಳಿದ್ದಾರೆ.

**VI. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 * 2 = 2**

**(ತಪ್ಪಿಲ್ಲದೆ ಬರೆದ ಎರಡು ಪೂರ್ಣ ಸಾಲಿಗೆ 1 ಅಂಕ)**

17. ನವಭಾವ–ನವಜೀವನ–ನವಶಕ್ತಿ ತುಂಬಿಸುವ
ಹಾಡೊಮ್ಮೆ ಹಾಡಬೇಕು;
ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ
ವೀರಧ್ವನಿಯೇರಬೇಕು;

ಅಥವಾ

ಉನ್ನತೋನ್ನತ ಘನಹಿಮಾದ್ರಿ ಶಿಖರವನೇರಿ
ಹಾಡಲ್ಲಿ ಹಾಡಬೇಕು;
ಹಾಡುನುಡಿಗುಂಡುಗಳು ಹಾರಿ ದಶದಿಕ್ಕಿನಲಿ
ಭಯದ ಬೆನ್ನಟ್ಟಬೇಕು;

**VII. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಆಧರಿಸಿ ಸಾರಾಂಶವನ್ನು ಬರೆಯಿರಿ.**
**1 * 2 = 2**

| | |
|---|---|
| **ಮೌಲ್ಯವನ್ನು ಗುರುತಿಸುವುದು** | **1. ಅಂಕ** |
| **ಸಾರಾಂಶ ಬರೆಯುವುದಕ್ಕೆ, ಭಾಷಾ ಶೈಲಿ** | **1. ಅಂಕಗಳು** |
| **ಒಟ್ಟು** | **2. ಅಂಕಗಳು** |

1.
18. ನಿಯತಿಯನಾರ್ ಮೀಱಿದಪರ್
ಭಯಮೇವುದೊ ಮುಟ್ಟಿದೆಡೆಗೆ ಸೈರಿಸುವುದೆ ಕೇಳ್ ।
ನಯವಿದೆ ಪೆತ್ತ ಪರೀಷಹ
ಜಯಮೆ ತಪಂ ತಪಕೆ ಬೇಱೆ ಕೋಡೆರಡೊಳವೇ ॥

ಈ ಪದ್ಯಭಾಗವನ್ನು ತೆಕ್ಕುಂಜೆ ಗೋಪಾಲಕೃಷ್ಣಭಟ್ಟ ಅವರು ಸಂಪಾದಿಸಿದ **ಜನ್ನಕವಿ** ವಿರಚಿತ **'ಯಶೋಧರ ಚರಿತೆ'** ಕಾವ್ಯದಿಂದ ಆಯ್ದ **'ನಿಯತಿಯನಾರ್ ಮೀರಿದಪರ್'** ಎಂಬ ಪದ್ಯಪಾಠದಿಂದ ಆರಿಸಿದೆ.
ಅಭಯರುಚಿಯು ಅಭಯಮತಿಗೆ "ಎಲೆ ತಾಯಿ, ಮರಣದ ಸಮಯದಲ್ಲಿ ಹೆದರಬೇಡ, ವಿಧಿನಿಯಮವನ್ನು ಯಾರು ತಾನೇ ಮೀರಲು ಸಾಧ್ಯ? ಕಷ್ಟ ಬಂದಾಗ ಅದನ್ನು ಸಹಿಸಿಕೊಳ್ಳುವುದೇ ಸರಿಯಾದುದು. ಪಡೆದ ಪರೀಷಹ ಜಯವೇ ತಪಸ್ಸು; ತಪಸ್ಸಿಗೆ ಬೇರೆ ಎರಡು ಕೋಡುಗಳುಂಟೆ!" ಎಂದು ಸಮಾಧಾನ ಹೇಳಿದನು.
ಈ ಮಾತಿನಲ್ಲಿ ವಿಧಿಯ ನಿಯಮವನ್ನು ಮನುಷ್ಯರಾದವರಿಗೆ ಮೀರಲು ಸಾಧ್ಯವಿಲ್ಲ. ಬಂದದ್ದನ್ನು ಅನುಭವಿಸಲೇಬೇಕು ಎಂಬ ಭಾವ ಅಭಿವ್ಯಕ್ತಗೊಂಡಿದೆ.

**VIII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1 * 4 = 4**

| | |
|---|---|
| **ಉತ್ತರದ ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ** | **3 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕಗಳು** |
| **ಒಟ್ಟು** | **4 ಅಂಕಗಳು** |

19. ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ವಿವರಿಸಿ.
ಕೋಲ್ಕತ್ತಾ ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿ ಮೈಸೂರಿನಿಂದ ಹೊರಟ ದಿನ ಅವರಿಗೆ ಕೊಟ್ಟಂಥ ವೈಭವದ ಬೀಳ್ಕೊಡುಗೆ ಯಾವ ಚಕ್ರವರ್ತಿಗೂ ದೊರೆತಿರಲಾರದು. ಅಂದಿನ ವಾತಾವರಣದಲ್ಲಿದ್ದುದು ವೈಭವಕ್ಕಿಂತ ಹೆಚ್ಚಾಗಿ ಹೃದಯದಿಂದ ನೇರವಾಗಿ ಹೊರಹೊಮ್ಮಿದ ಗುರುಪ್ರೇಮ. ರೈಲು ನಿಲ್ದಾಣಕ್ಕೆ ಕರೆದೊಯ್ಯುವಾಗ ಸಾರೋಟಿಗೆ ಕುದುರೆಯನ್ನು ಕಟ್ಟಲಿಲ್ಲ. ಸ್ವತಃ ವಿದ್ಯಾರ್ಥಿಗಳೇ ಎಳದೊಯ್ದರು. ರಾಧಾಕೃಷ್ಣನ್ ಅವರಿಗಾಗಿ ಕಾದಿರಿಸಿದ್ದ ಕಂಪಾರ್ಟ್‌ಮೆಂಟನ್ನು ಒರಗುದಿಂಬು ಹಾಗೂ ರತ್ನಗಂಬಳಿಯನ್ನು ಹಾಕಿ, ಮಲಗುವ ಸೀಟನ್ನು, ನೆಲವನ್ನು ಹೂವಿನಿಂದ ಸುಪ್ಪತ್ತಿಗೆಯಂತೆ ಮಾಡಿ, ದೈವಮಂದಿರವನ್ನು ಭಕ್ತರು ಅಲಂಕರಿಸುವಂತೆ ಅಲಂಕರಿಸಲಾಗಿತ್ತು. "ರಾಧಾಕೃಷ್ಣನ್ ಅವರಿಗೆ ಜಯವಾಗಲಿ" ಎಂಬ ಕೂಗು ರೈಲ್ವೆ ಸ್ಟೇಷನ್ನಿನ ಆವರಣದಲ್ಲೆಲ್ಲ ಮೊಳಗುತ್ತಿತ್ತು. ಆ ದಿನ ಭಾವೋದ್ರೇಕದಿಂದ ಅದೆಷ್ಟು ಜನ ಅತ್ತರೋ! ವಿದ್ಯಾರ್ಥಿಗಳು ತೋರಿದ ವಿಶ್ವಾಸ ರಾಧಾಕೃಷ್ಣನ್ ಅವರ ಕಣ್ಣಿನಲ್ಲೂ ನೀರು ತಂದಿತು.

ಅಥವಾ

ಹಿಂದೂಧರ್ಮ ಮತ್ತು ತತ್ತ್ವಶಾಸ್ತ್ರದ ಬಗ್ಗೆ ರಾಧಾಕೃಷ್ಣನ್ ಅಭಿಪ್ರಾಯವೇನು? ವಿವರಿಸಿ.
ರಾಧಾಕೃಷ್ಣನ್ ಅವರು ಹಿಂದೂ ಧರ್ಮದ ತತ್ವಶಾಸ್ತ್ರ ಮತ್ತು ಸಾಹಿತ್ಯವನ್ನೆಲ್ಲ ಅಧ್ಯಯನ ಮಾಡಿದರು. ಯುರೋಪಿಯನ್ ತತ್ವಶಾಸ್ತ್ರ ಮತ್ತು ಸಾಹಿತ್ಯದ ಅಭಿವ್ಯಕ್ತ ವಿಚಾರಗಳಿಂದ ಅವರ ವಿಶ್ವದೃಷ್ಟಿ ಮತ್ತು ತಾತ್ವಿಕ

ದೃಷ್ಟಿಕೋನ ಪ್ರಭಾವಿತವಾಗಿತ್ತು. ಸ್ವಾಮಿವಿವೇಕಾನಂದರ ವಿಚಾರಧಾರೆ ಅವರ ಮನವನ್ನು ಆಕರ್ಷಿಸಿತು. ಅವರು "ಹಿಂದೂ ಧರ್ಮವು ಒಂದು ವೈಚಾರಿಕ ಜೀವನ ಮಾರ್ಗವಾಗಿದ್ದು, ನೈತಿಕ ಗುಣಾತ್ಮಕ ವಿಷಯಗಳಿಂದ ಕೂಡಿದ್ದು, ಮಾನವನ ಆಂತರಿಕ ಜೀವನದ ಬಗ್ಗೆ ಪ್ರಾಮುಖ್ಯವುಳ್ಳದ್ದಾಗಿದೆ. ಹಿಂದೂ ಧರ್ಮವಾಗಲಿ, ವೇದಾಂತವಾಗಲಿ ಅಸತ್ಯವನ್ನು ಹೇಳುವುದಿಲ್ಲ. ಭಾರತೀಯ ಚಿಂತನೆಗಳು ಯಾವುದೋ ವಿಚಿತ್ರ ಮತ್ತು ನಿಗೂಢ ಪರಿಕಲ್ಪನೆಗಳಾಗಿಲ್ಲ, ಜೀವನದ ನಾಡಿ ಮಿಡಿತಗಳನ್ನು ಸೂಕ್ಷ್ಮ ಮನಸ್ಸಿನ ಚಿಂತನೆಗಳನ್ನು ತಿಳಿಯಪಡಿಸುವುದಾಗಿದೆ" ಎಂದು ಸರಳವಾಗಿ ಹೇಳಿದರು.

**IX. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 01*04 =04 (2+2)**
**(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)**

20. ಭಾರತೀಯ ಕ್ರಿಕೆಟಿನ ಯಶಸ್ಸಿನ ಹಿಂದೆ ನೂರಾರು ಖ್ಯಾತನಾಮರಿದ್ದಾರೆ. ಅವರಲ್ಲಿ ಕರ್ನಾಟಕದ ರಾಹುಲ್ ದ್ರಾವಿಡ್ ಸಹ ಒಬ್ಬರು. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ಮಾತು ರಾಹುಲ್ ದ್ರಾವಿಡ್ ಅವರಿಗೆ ಸೊಗಸಾಗಿ ಅನ್ವಯವಾಗುತ್ತದೆ. ಅವರು ಬಾಲ್ಯದಲ್ಲಿಯೇ ಕ್ರಿಕೆಟ್ ಆಟದಲ್ಲಿ ಆಸಕ್ತಿಹೊಂದಿ ಸತತ ಅಭ್ಯಾಸ ಮಾಡುತ್ತಿದ್ದರು. ಅದರ ಫಲವಾಗಿ ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ಶಾಲಾತಂಡವನ್ನು ಪ್ರತಿನಿಧಿಸುವಂತಾಯಿತು. ಆಡಿದ ಮೊದಲ ಪಂದ್ಯದಲ್ಲಿಯೇ ಶತಕವನ್ನು ಬಾರಿಸಿದರು. ಒಂದು ಉತ್ತಮವಾದ ಎಸೆತವು ಪ್ರಸಿದ್ಧ ಆಟಗಾರನನ್ನಾದರೂ ಔಟ್ ಮಾಡಬಹುದು. ಆದರೆ ರಾಹುಲ್ ದ್ರಾವಿಡ್ ಅವರದ್ದು ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನು ನಿಭಾಯಿಸುವ, ವಿಕೆಟ್ಟನ್ನು ಒಪ್ಪಿಸದಿರುವ, ಸಾವಕಾಶವಾಗಿ ರನ್ ಗಳಿಸುವ ಅದ್ವಿತೀಯ ಬ್ಯಾಟಿಂಗ್ ಶೈಲಿ. ದಿನವಿಡಿ ಕ್ರೀಸಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಅವರದ್ದು. ಅದೇ ಅವರನ್ನು 'ಗೋಡೆ' ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರನ್ನಾಗಿಸಿತು. ಬೌಂಡರಿ ಬಾರಿಸು ಅಥವಾ ಔಟಾಗು ಎಂಬ ಮನೋಭಾವದ ಆಟಗಾರರಿಗಿಂತ ಭಿನ್ನವಾದ ಶೈಲಿ ರಾಹುಲ್ ಅವರದ್ದು. ಸಂಯಮದ ಹೊಡೆತ, ಉತ್ತಮ ಎಸೆತವನ್ನು ಗೌರವಿಸುವುದು, ಕೆಟ್ಟ ಎಸೆತವನ್ನು ಅಷ್ಟೇ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವುದು, ಎಲ್ಲ ಬಗೆಯ ಹೊಡೆತಗಳಲ್ಲೂ ಶಿಸ್ತು, ಕಲಾತ್ಮಕತೆ, ಎಲ್ಲವೂ ನಯನ ಮನೋಹರ. ಇವು ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯವಾಗಿತ್ತು. ರಾಹುಲ್ ದ್ರಾವಿಡ್ ಅವರು ಎಂದೂ ಸ್ವಂತ ದಾಖಲೆಗಾಗಿ ಆಡಿದವರಲ್ಲ; ತಂಡದ ಗೆಲುವಿಗಾಗಿ; ದೇಶದ ಗೌರವಕ್ಕಾಗಿ ಆಡಿದವರು.

**ಪ್ರಶ್ನೆಗಳು :**

(ಅ) ರಾಹುಲ್ ದ್ರಾವಿಡ್ ಅವರನ್ನು 'ಗೋಡೆ' ಎಂದು ಕರೆಯಲು ಕಾರಣವೇನು?
ಒಂದು ಉತ್ತಮವಾದ ಎಸೆತವು ಪ್ರಸಿದ್ಧ ಆಟಗಾರನನ್ನಾದರೂ ಔಟ್ ಮಾಡಬಹುದು. ಆದರೆ ರಾಹುಲ್ ದ್ರಾವಿಡ್ ಅವರದ್ದು ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನು ನಿಭಾಯಿಸುವ, ವಿಕೆಟ್ಟನ್ನು ಒಪ್ಪಿಸದಿರುವ, ಸಾವಕಾಶವಾಗಿ ರನ್ ಗಳಿಸುವ ಅದ್ವಿತೀಯ ಬ್ಯಾಟಿಂಗ್ ಶೈಲಿ. ದಿನವಿಡಿ ಕ್ರೀಸಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಅವರದ್ದು. ಅದೇ ಅವರನ್ನು 'ಗೋಡೆ' ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರನ್ನಾಗಿಸಿತು.

(ಬ) ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯಗಳೇನು?
ಬೌಂಡರಿ ಬಾರಿಸು ಅಥವಾ ಔಟಾಗು ಎಂಬ ಮನೋಭಾವದ ಆಟಗಾರರಿಗಿಂತ ಭಿನ್ನವಾದ ಶೈಲಿ ರಾಹುಲ್ ಅವರದ್ದು. ಸಂಯಮದ ಹೊಡೆತ, ಉತ್ತಮ ಎಸೆತವನ್ನು ಗೌರವಿಸುವುದು, ಕೆಟ್ಟ ಎಸೆತವನ್ನು ಅಷ್ಟೇ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವುದು, ಎಲ್ಲ ಬಗೆಯ ಹೊಡೆತಗಳಲ್ಲೂ ಶಿಸ್ತು, ಕಲಾತ್ಮಕತೆ, ಎಲ್ಲವೂ ನಯನ ಮನೋಹರ. ಇವು ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯವಾಗಿತ್ತು.

**X. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ, ಪತ್ರ ಬರೆಯಿರಿ. 1 * 4 = 4**

| | |
|---|---|
| **ಇಂದ, ಗೆ, ಸಂಬೋಧನೆ, ವಿಷಯ** | **1 ಅಂಕ** |
| **ಪತ್ರದ ಒಡಲು – ವಿಷಯ ನಿರೂಪಣೆ** | **1 ಅಂಕಗಳು** |
| **ಮುಕ್ತಾಯ, ಇಂತಿ, ಸ್ಥಳ, ದಿನಾಂಕ** | **1 ಅಂಕ** |

| | |
|---|---|
| **ಭಾಷಾ ಶೈಲಿ, ಪದಬಂಧ, ವಿನ್ಯಾಸ** | **1 ಅಂಕ** |
| **ಒಟ್ಟು** | **4 ಅಂಕಗಳು** |

**ಅಥವಾ**

| | |
|---|---|
| **ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ** | **1 ಅಂಕ** |
| **ಒಡಲು / ಸಮರ್ಥ ವಿವರಣೆಯೊಂದಿಗೆ ವಿಷಯ ನಿರೂಪಣೆ** | **1 ಅಂಕಗಳು** |
| **ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ** | **1 ಅಂಕ** |
| **ಭಾಷಾ ಶೈಲಿ, ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

21. ನಿಮ್ಮನ್ನು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಕಂಪಲಾಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಶಿವರಾಜು' ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಸ್ಥಳೀಯ ದಿನಪತ್ರಿಕೆ ಸಂಪಾದಕರಿಗೆ ಪತ್ರವನ್ನು ಬರೆಯಿರಿ.

**ಇಂದ**

ಶಿವರಾಜು,
9 ನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
ಕಂಪಲಾಪುರ,
ಹುಣಸೂರು ತಾಲೂಕು.

**ದಿನಾಂಕ : 23–09–2019**
**ಸ್ಥಳ : ಕಂಪಲಾಪುರ**

**ಇವರಿಗೆ**

ಮಾನ್ಯ ಸಂಪಾದಕರು,
ಮೈಸೂರು ಮಿತ್ರ ದಿನ ಪತ್ರಿಕೆ,
ಮೈಸೂರು.

**ಮಾನ್ಯರೇ**

**ವಿಷಯ :–** ನಮ್ಮ ಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಮನವಿ

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ದಿನಾಂಕ : 05–09–2019 ರಂದು 'ಶಿಕ್ಷಕರ ದಿನಾಚರಣೆ' ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ನಮ್ಮ ಕ್ಷೇತ್ರದ ಮಾನ್ಯ ಶಾಸಕರು ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಡಾ. ರಾಧಾಕೃಷ್ಣನ್ ಅವರ ಆದರ್ಶಗುಣಗಳನ್ನು ಶಿಕ್ಷಕರು ಮೈಗೂಡಿಸಿಕೊಳ್ಳುವಂತೆ ಕರೆ ನೀಡಿದರು, ಶಾಲೆಯ ಶಿಕ್ಷಕರನ್ನು ಗೌರವಿಸಲಾಯಿತು. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಯಿಸಿಕೊಟ್ಟರು. ಪೋಷಕರು ಕಾರ್ಯಕ್ರಮದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮುಖ್ಯಶಿಕ್ಷಕರು ಹಾಗೂ ಶಿಕ್ಷಕ ವರ್ಗದವರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಈ ಕಾರ್ಯಕ್ರಮದ ಸವಿವರದ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು, ದಯಮಾಡಿ ಕಾರ್ಯಕ್ರಮದ ವರದಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ನನ್ನ ಕೋರಿಕೆಯು ಈಡೇರುವುದೆಂದು ನಂಬಿರುತ್ತೇನೆ.

**ವಂದನೆಗಳೊಡನೆ**

**ತಮ್ಮ ನಂಬುಗೆಯ**
**ಸಹಿ/–**
ಶಿವರಾಜು,

**ಹೊರ ವಿಳಾಸ**

| **ಇಂದ** | **ಇವರಿಗೆ** |
| --- | --- |
| ಶಿವರಾಜು,<br>9 ನೆಯ ತರಗತಿ,<br>ಸರ್ಕಾರಿ ಪ್ರೌಢಶಾಲೆ,<br>ಕಂಪಲಾಪುರ,<br>ಹುಣಸೂರು ತಾಲೂಕು. | ಮಾನ್ಯ ಸಂಪಾದಕರು,<br>ಮೈಸೂರು ಮಿತ್ರ ದಿನ ಪತ್ರಿಕೆ,<br>ಮೈಸೂರು. |

ಅಥವಾ

**'ನಾನು ಮೆಚ್ಚಿದ ಪುಸ್ತಕ'** ಎಂಬ ವಿಷಯವನ್ನು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.

**ಪ್ರಸ್ತಾವನೆ :** ಓದುವುದು ಒಂದು ಅತ್ಯುತ್ತಮ ಹವ್ಯಾಸ. ಓದುವುದರಿಂದ ಜ್ಞಾನ ಸಂಪಾದನೆಯ ಜೊತೆಗೆ ಮನಸ್ಸಿಗೆ ಆನಂದವುಂಟಾಗುತ್ತದೆ. ಆದುದರಿಂದ ಉತ್ತಮ ಸಾಹಿತ್ಯ ಕೃತಿಗಳನ್ನು ಓದುವುದು ನನ್ನ ಹವ್ಯಾಸವಾಗಿದೆ. ನಾನು ಹಲವು ಸಾಹಿತ್ಯ ಕೃತಿಗಳನ್ನು ಓದಿದ್ದೇನೆ.
**ವಿಷಯ ನಿರೂಪಣೆ :** ನನಗೆ ಮೆಚ್ಚುಗೆಯಾದ ಪುಸ್ತಕವೆಂದರೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಕನ್ನಡಕ್ಕೆ ಅನುವಾದಿಸಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಆತ್ಮಕಥೆ **'ನನ್ನ ಸತ್ಯಾನ್ವೇಷಣೆ'**. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಮೂಲಕೃತಿಯ ಪ್ರತಿ ಅಂಶಗಳನ್ನು ಸರಳ ಹಾಗೂ ಸುಂದರ ಶೈಲಿಯಲ್ಲಿ ನಿರೂಪಿಸಿದ್ದಾರೆ. ಈ ಕೃತಿಯಲ್ಲಿ ಗಾಂಧೀಜಿಯವರು ತಮ್ಮ ಜೀವನದಲ್ಲಿ ಸತ್ಯಶೋಧನೆಗಾಗಿ ನಡೆಸಿದ ಪ್ರಯೋಗಗಳನ್ನು ಆತ್ಮಕಥೆಯ ರೂಪದಲ್ಲಿ ವಿವರಿಸಿದ್ದಾರೆ. ಒಬ್ಬ ಸಾಮಾನ್ಯ ವಕೀಲ, ಒಂದು ದೇಶದ ರಾಷ್ಟ್ರಪಿತನ ಪವಿತ್ರ ಸ್ಥಾನದವರೆಗೆ ನಡೆದುಬಂದ ರೀತಿಯನ್ನು ಓದುತ್ತಿದ್ದಂತೆ, ಪೂಜ್ಯ ಗೌರವ ಭಾವನೆಗಳು ಮೈಮನಗಳಲ್ಲಿ ತುಂಬಿಕೊಳ್ಳುತ್ತದೆ. ಈ ಕೃತಿಯನ್ನು ಓದಿದ್ದರಿಂದ ನನಗೆ ಮಹಾತ್ಮನ ಮಹಾನ್ ವ್ಯಕ್ತಿತ್ವದ ಬಗ್ಗೆ ಸಂಪೂರ್ಣವಾಗಿ ಪರಿಚಯವಾಯಿತು.
**ಉಪಸಂಹಾರ :** ಗಾಂಧೀಜಿಯವರು ತಾವು ಪ್ರತಿಪಾದಿಸಿದ ಸತ್ಯ, ಅಹಿಂಸೆ ಹಾಗೂ ಸರಳಜೀವನವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ನಡೆಸಿದ ಹೋರಾಟ ನಮ್ಮಂತಹವರಿಗೆ ದಾರಿದೀಪವಾಗುವುದರಲ್ಲಿ ಸಂಶಯವಿಲ್ಲ. ಇಂತಹ ಒಂದು ಸುಂದರ ಪುಸ್ತಕವನ್ನು ಓದಿ, ಜ್ಞಾನ ಸಂಪಾದನೆಯ ಜೊತೆಗೆ ಆನಂದವನ್ನು ಪಡೆದೆನು. ಅದ್ದರಿಂದ ನನಗೆ ಈ ಪುಸ್ತಕ ಮೆಚ್ಚುಗೆಯಾಗಿದೆ.

---- 0 ----